KAMS610032862021

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

ದಿನಾಂಕ 02 ನೇ ಏಪ್ರಿಲ್ 2026.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 1973/2021**

ಪಿರ್ಯಾದಿದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
( ಸಹಾಯಕ ಸರ್ಕಾರಿ ಅಭಿಯೋಜಕರವರಿಂದ )

**ವಿರುದ್ಧ**

ಆರೋಪಿಗಳು :

**1.** ರಘು ಉಃ ಲಕ್ಷ್ಮಣ ಬಿನ್ ಚಂದ್ರುಶೆಟ್ಟಿ,
ವಯಸ್ಸು 30 ವರ್ಷ,

**2.** ಚಂದ್ರುಶೆಟ್ಟಿ ಬಿನ್ ಲೇ.ಜವರಶೆಟ್ಟಿ,
ವಯಸ್ಸು 60 ವರ್ಷ,

**3.** ರಮೇಶ ಬಿನ್ ಚಂದ್ರುಶೆಟ್ಟಿ,
ವಯಸ್ಸು 34 ವರ್ಷ,

ಆರೋಪಿಗಳ ವಾಸಃ
ಗಾಂಧಿನಗರ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

*(ಆರೋಪಿಗಳ ಪರವಾಗಿ ಶ್ರೀ **ಕೆ.ಬಿ.ಎಸ್** ., ವಕೀಲರು )*

| | | | |
|---|---|---|---|
| 1. | ಕೃತ್ಯ ನಡೆದ ದಿನಾಂಕ | : | 16.11.2020 |
| 2. | ಕೃತ್ಯ ವರದಿ ಮಾಡಿದ ದಿನಾಂಕ | : | 16.11.2020 |
| 3. | ದೂರುದಾರರ ಹೆಸರು | : | ರಾಮಶೆಟ್ಟಿ |
| 4. | ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 22.01.2026 |
| 5. | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 16.02.2026 |
| 6. | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.504, 324, 323 ಮತ್ತು 506 ಸಹವಾಚಕ 34. |
| 7. | ನ್ಯಾಯಾಲಯದ ತೀರ್ಮಾನ | : | ನಿರ್ದೋಷಿಗಳು. |

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ತೀರ್ಪು :-**

ಪಿರಿಯಾಪಟ್ಟಣ ಪೊಲೀಸ್ ಠಾಣಾಧಿಕಾರಿಗಳು, ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ.504, 324, 323 ಮತ್ತು 506 ಸಹವಾಚಕ 34 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. <u>ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ</u> :-

ದಿನಾಂಕ 16.11.2020 ರಂದು ಬೆಳ್ಳಿಗೆ 6.15 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಗಾಂಧಿನಗರ ಗ್ರಾಮದಲ್ಲಿ ಚಾಸಾ.1 ರಾಮಶೆಟ್ಟಿರವರ ಮನೆಯ ಬಳಿ ಚಾಸಾ.2 ಮೋಹನ್ ರವರ ಕಲ್ಲಚ್ಚಿನ ಬಕೆಟ್ಟಿನ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿಗಳು ಏಕೋದ್ದೇಶದಿಂದ ಅವರ ಪೈಕಿ, 1ನೇ ಆರೋಪಿಯು ಕಲ್ಲಚ್ಚಿನ ಬಕೆಟ್ಟಿಗೆ ಕಾಲಿನಿಂದ ಒದ್ದು, ಚಾಸಾ.2 ಮೋಹನ್  ರವರಿಗೆ ಈ ರಸ್ತೆಯು ನಿಮ್ಮಪ್ಪಂದಾ,  ಏನೋ ಬೋಳಿ ಮಗನೆ ನೀನು ನಮ್ಮ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಾ ನನಗೆ ತಿರುಗಿ ಪ್ರಶ್ನೆ ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತಾರೆ. ಜಗಳ ಬಿಡಿಸಲು ಬಂದ ಚಾಸಾ.1 ರಾಮಶೆಟ್ಟಿರವರಿಗೆ ಆರೋಪಿಗಳು ಬೋಳಿಮಕ್ಕಳಾ, ಸೂಳೆ ಮಕ್ಕಳಾ ನೀವು ಸಣ್ಣಪುಟ್ಟ ವಿಚಾರಕ್ಕೆ ನಮ್ಮ ಮೇಲೆ ಗಲಾಟೆ ಮಾಡುತ್ತೀರಾ ಎಂದು  ನಿಂದಿಸಿರುತ್ತಾರೆ. ನಂತರ 1ನೇ ಆರೋಪಿಯು ತಮ್ಮ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.1 ರಾಮಶೆಟ್ಟಿ ರವರ ಬೆನ್ನಿನ ಹಿಂಭಾಗ ಬೀಸಿ  ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿ ಹಾಗೂ ಜಗಳ ಬಿಡಿಸಲು ಬಂದ ಚಾಸಾ.5 ಸುರೇಶಶೆಟ್ಟಿ ರವರಿಗೆ 1ನೇ ಆರೋಪಿಯು ಅದೇ ಮಚ್ಚಿನಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿರುತ್ತಾರೆ. ಜಗಳ ಬಿಡಿಸಲು ಬಂದ

ಚಾಸಾ.6 ಅಶೋಕ ರವರಿಗೆ 3 ನೇ ಅರೋಪಿಯು ಒಂದು ಕಲ್ಲಿನಿಂದ ಬಲ ಕೈಗೆ ಹಾಗೂ 2 ನೇ ಆರೋಪಿಯು ಒಂದು ದೊಣ್ಣೆಯಿಂದ ಬಲಕೈನ ಭುಜದ ಬಳಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿರುತ್ತಾರೆ.

ನಂತರ 1 ನೇ ಆರೋಪಿಯು ಚಾಸಾ.8 ಭಾಗ್ಯಮ್ಮ ರವರಿಗೆ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತಾರೆ. ಆರೋಪಿಗಳು ಚಾಸಾ.1, 2 ಹಾಗೂ ಚಾಸಾ.5 ರಿಂದ 8 ರವರಿಗೆ ಈ ದಿನ ತಮ್ಮಿಂದ ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲ ನಾಳೆ ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣಾ ಬೆದರಿಕೆ ಹಾಕಿರುತ್ತಾರೆಂದು ಆರೋಪಿಗಳ ವಿರುದ್ದ ಪಿರಿಯಾಪಟ್ಟಣ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಠಾಣಾಧಿಕಾರಿಗಳು, ಚಾಸಾ.17 ರಾಜಣ್ಣ ರವರು, ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ಚಿಕ್ಕಮ್ಮ ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆಃ318/2020 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ ಸಂಹಿತೆ ಕಲಂ.504, 324, 323 ಮತ್ತು 506 ಸಹವಾಚಕ 34 ರಡಿಗಳಲ್ಲಿ ಶಿಕ್ಷಿಸಬಹುದಾದ ದೋಷಾರೋಪಣೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿಗಳ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 17 ಸಾಕ್ಷಿಗಳ ಪೈಕಿ 6 ಸಾಕ್ಷಿಗಳನ್ನು ಪ್ರಾಸಾ.1 ರಿಂದ 6 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 9 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ

ಮಾನ್ಯ ಅಭಿಯೋಜನೆಯ ಸಾಕ್ಷ್ಯದಲ್ಲಿ, ಆರೋಪಿಗಳಿಗೆ ವ್ಯತಿರಿಕ್ತವಾದ ಯಾವುದೇ ಸಂದರ್ಭಗಳು ಕಂಡುಬಾರದ ಕಾರಣ, ಆರೋಪಿಗಳನ್ನು ದಂ.ಪ್ರ.ಸಂ.ಕಲಂ.313 ರಡಿ ವಿಚಾರಣೆ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

**<u>ಅಂಶಗಳು</u>**

**1.** ದಿನಾಂಕ 16.11.2020 ರಂದು ಬೆಳ್ಳಿಗೆ 6.15 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ಗಾಂಧಿನಗರ ಗ್ರಾಮದಲ್ಲಿ ಚಾಸಾ.1 ರಾಮಶೆಟ್ಟಿ ರವರ ಮನೆಯ ಬಳಿ ಚಾಸಾ.2 ಮೋಹನ್ ರವರ ಕಲಗಚ್ಚಿನ ಬಕೆಟ್ಟಿನ ವಿಷಯಕ್ಕೆ ಸಂಬಂಧಿಸಿದಂತೆ, ಆರೋಪಿಗಳು ಏಕೋದ್ದೇಶದಿಂದ ಅವರ ಪೈಕಿ, 1 ನೇ ಆರೋಪಿಯು ಸದರಿ ಕಲ್ಗಚ್ಚಿನ ಬಕೆಟ್ಟಿಗೆ ಕಾಲಿನಿಂದ ಒದ್ದು, ಚಾಸಾ.2 ಮೋಹನ್ ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಕುರಿತು ಈ ರಸ್ತೆಯು ನಿಮ್ಮಪ್ಪಂದಾ ಎಂದು, ಏನೋ ಬೋಳಿ ಮಗನೆ ನೀನು ನಮ್ಮ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಾ ನನಗೆ ತಿರುಗಿ ಪ್ರಶ್ನೆ ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತೀರಿ ಹಾಗೂ ಜಗಳ ಬಿಡಿಸಲು ಬಂದ ಚಾಸಾ.1 ರಾಮಶೆಟ್ಟಿರವರಿಗೂ ಸಹಾ ಆರೋಪಿಗಳು

ಬೋಳಿಮಕ್ಕಳಾ, ಸೂಳೆ ಮಕ್ಕಳಾ ನೀವು ಸಣ್ಣಪುಟ್ಟ ವಿಚಾರಕ್ಕೆ ನಮ್ಮ ಮೇಲೆ ಗಲಾಟೆ ಮಾಡುತ್ತೀರಾ ಎಂದು ಚಾಸಾ.1 ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂದು ಅವರನ್ನು ಉದ್ರೇಗಿಸಿರುತ್ತೀರಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳು ಏಕೋದ್ದೇಶದಿಂದ ಅವರ ಪೈಕಿ 1ನೇ ಆರೋಪಿಯು ತಮ್ಮ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ.1 ರಾಮಶೆಟ್ಟಿ ರವರ ಬೆನ್ನಿನ ಹಿಂಭಾಗ ಬೀಸಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿ ಹಾಗೂ ಜಗಳ ಬಿಡಿಸಲು ಬಂದ ಚಾಸಾ.5 ಸುರೇಶಶೆಟ್ಟಿ ರವರಿಗೆ 1ನೇ ಆರೋಪಿಯು ಅದೇ ಮಚ್ಚಿನಿಂದ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿದ್ದು ಹಾಗೂ ಜಗಳ ಬಿಡಿಸಲು ಬಂದ ಚಾಸಾ.6 ಅಶೋಕ ರವರಿಗೆ 3ನೇ ಅರೋಪಿಯು ಒಂದು ಕಲ್ಲಿನಿಂದ ಬಲ ಕೈಗೆ ಹಾಗೂ 2ನೇ ಆರೋಪಿಯು ಒಂದು ದೊಣ್ಣೆಯಿಂದ ಅವರ ಬಲಕೈನ ಭುಜದ ಬಳಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳು ಏಕೋದ್ದೇಶದಿಂದ ಅವರ ಪೈಕಿ, 1ನೇ ಆರೋಪಿಯು ಚಾಸಾ.8 ಭಾಗ್ಯಮ್ಮ ರವರಿಗೆ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಗಳು ಏಕೋದ್ದೇಶದಿಂದ ಚಾಸಾ.1, 2 ಹಾಗೂ ಚಾಸಾ.5 ರಿಂದ 8 ರವರಿಗೆ ಈ ದಿನ ನಮ್ಮಿಂದ ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲ ನಾಳೆ ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣಾ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**5.** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 4 : **"ನಕಾರಾತ್ಮಕವಾಗಿ"**

ಅಂಶ-5 : ಅಂತಿಮ ಆದೇಶದಂತೆ,

ಈ ಕೆಳಕಂಡ,

## <u>ಕಾ ರ ಣ ಗ ಳು</u>

**<u>ಅಂಶ-1 ರಿಂದ 4 :-</u>**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ಪರಿಗಣಿಸಲಾಗಿದೆ.

**10.** ಮಾನ್ಯ ಅಭಿಯೋಜನೆಯು ತಮ್ಮ ದೋಷಾರೋಪಣೆಯನ್ನು ಸಾಭೀತುಪಡಿಸಲು ಈ ಪ್ರಕರಣದ ದೂರುದಾರರಾದ ಚಾಸಾ.1 ರಾಮಶೆಟ್ಟಿ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ವಿಷಯ ತನಗೆ ಗೊತ್ತಿಲ್ಲ. ಚಾಸಾ.2 ರಿಂದ 8 ರವರು ತನಗೆ ಗೊತ್ತು. ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿಲ್ಲ, ತಮಗೆ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ, ದೊಣ್ಣೆಯಿಂದ ಅಥವಾ ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಒದ್ದಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾನು ಆರೋಪಿಗಳ ವಿರುದ್ಧ ಯಾವುದೇ ದೂರು ನೀಡಿಲ್ಲ. ದೂರನ್ನು ನಿಪಿ.1 ಎಂದು, ತಮ್ಮ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಗಿದೆ. ನಿಪಿ.1 ರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ಅಥವಾ ಮುಂದುವರಿದ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು

ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**11.** ಇನ್ನೂ ಚಾಸಾ.2 ಮೋಹನ ರವರನ್ನು ಪ್ರಾಸಾ.2 ರಂತೆ, ಚಾಸಾ.5 ಸುರೇಶ ಶೆಟ್ಟಿ ರವರನ್ನು ಪ್ರಾಸಾ.3 ರಂತೆ, ಚಾಸಾ.4 ಭಾಗ್ಯಮ್ಮ ರವರನ್ನು ಪ್ರಾಸಾ.4 ರಂತೆ ಹಾಗೂ ಚಾಸಾ.7 ಮಧು ರವರನ್ನು ಪ್ರಾಸಾ.5 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ವಿಷಯ ತಮಗೆ ಗೊತ್ತಿಲ್ಲ. ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿಲ್ಲ, ತಮಗೆ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ, ದೊಣ್ಣೆಯಿಂದ ಅಥವಾ ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಒದ್ದಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾವು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.2 ರಿಂದ 5 ರವರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.2 ರಿಂದ 5 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**12.** ಇನ್ನೂ ಚಾಸಾ.6 ಅಶೋಕ ರವರನ್ನು ಪ್ರಾಸಾ.6 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ವಿಷಯ ತನಗೆ ಗೊತ್ತಿಲ್ಲ. ಚಾಸಾ.1 ರಿಂದ 5 ಹಾಗೂ 7 ತನಗೆ ಗೊತ್ತು. ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿಲ್ಲ, ತಮಗೆ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ, ದೊಣ್ಣೆಯಿಂದ ಅಥವಾ ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಒದ್ದಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ.8 ಅಮಾನತ್ತು ಮಹಜರಿನಲ್ಲಿರುವ ತಮ್ಮ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಗಿದೆ. ನಿಪಿ.8 ಕ್ಕೆ ತಾನು ಈಗ್ಗೆ 4-5 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು

ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ತಾನು ಯಾವುದೇ ವಸ್ತುಗಳನ್ನು ಠಾಣೆಗೆ ಹಾಜರುಪಡಿಸಿಲ್ಲ. ನಿಪಿ.8 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.6 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.6 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**13.** ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರಿಂದ 6 ರವರೇ ಮಾನ್ಯ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗದೇ ಇರುವುದರಿಂದ, ಉಳಿದ ಎಲ್ಲ ಸಾಕ್ಷಿಗಳನ್ನು ಕೈ ಬಿಡಲಾಯಿತು. ಹೀಗಾಗಿ, ಆರೋಪಿಗಳ ವಿರುದ್ಧವಾಗಿ ಹೊರಿಸಿದ ಆರೋಪಗಳಿಗೆ ಯಾವುದೇ ಸಾಕ್ಷ್ಯವಿಲ್ಲದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿನ ಆರೋಪಿಗಳ ಹೇಳಿಕೆಯನ್ನು ಸಹ ಕೈ ಬಿಡಲಾಯಿತು. ಆದ್ದರಿಂದ, ಆರೋಪಿಗಳನ್ನು ಶಿಕ್ಷಿಸಲು ಯಾವುದೇ

ಸಾಕ್ಷ್ಯವಿರುವುದಿಲ್ಲ ಮತ್ತು ಆರೋಪಿಗಳು ಖುಲಾಸೆಗೊಳ್ಳಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಪುಷ್ಠೀಕರಿಸಲು ವಿಫಲವಾಗಿದೆ ಎಂಬ ಅಭಿಪ್ರಾಯದ ಮೇರೆಗೆ, ನ್ಯಾಯಾಲಯವು ಮೇಲಿನ 1 ರಿಂದ 4ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-5 :-**

**14.** ಮೇಲಿನ ಅಂಶ-1 ರಿಂದ 4ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ, ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ.504, 324, 323 ಮತ್ತು 506 ಸಹವಾಚಕ 34ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಗಳ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಆರ್.ಸಂ.114/2024 ರಲ್ಲಿರುವ ಎರಡು ಕಬ್ಬಿಣದ ಮಚ್ಚು ಹಾಗೂ ಒಂದು ಕಬ್ಬಿಣದ ಸರಳು ಮೌಲ್ಯವುತ್ತವಾದ ವಸ್ತುಗಳಾದ್ದರಿಂದ, ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ದಂ.ಪ್ರ.ಸಂಹಿತೆ ಅಧ್ಯಾಯ 34ರ ರೀತ್ಯಾ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

ಪಿ.ಆರ್.ಸಂ.114/2024 ರಲ್ಲಿರುವ ಒಂದು ರಿಪೀಸ್ ಪಟ್ಟಿ ಹಾಗೂ ಒಂದು ಕಲ್ಲು ಮೌಲ್ಯರಹಿತವಾದ ವಸ್ತುಗಳಾದ್ದರಿಂದ, ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಗೆ ಆದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **02 ನೇ ಏಪ್ರಿಲ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by
YOGESH M R
Location: PRL.CIVIL
JUDGE AND JMFC.,
PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

## -: ಅನುಬಂಧ :-

## ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :-

| | | |
|---|---|---|
| ಪ್ರಾಸಾ.1 | - | ರಾಮಶೆಟ್ಟಿ |
| ಪ್ರಾಸಾ.2 | - | ಮೋಹನ |
| ಪ್ರಾಸಾ.3 | - | ಸುರೇಶ ಶೆಟ್ಟಿ |
| ಪ್ರಾಸಾ.4 | - | ಭಾಗ್ಯಮ್ಮ |
| ಪ್ರಾಸಾ.5 | - | ಮಧು |
| ಪ್ರಾಸಾ.6 | - | ಅಶೋಕ |

## ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :-

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.2 | - | ಪ್ರಾಸಾ.1 ರವರ ಮುಂದುವರೆದ ಹೇಳಿಕೆ |
| ನಿಪಿ.3 | - | ಪ್ರಾಸಾ.1 ರವರ ಮುಂದುವರೆದ ಹೇಳಿಕೆ |
| ನಿಪಿ.4 | - | ಪ್ರಾಸಾ.2 ರವರ ಹೇಳಿಕೆ |
| ನಿಪಿ.5 | - | ಪ್ರಾಸಾ.3 ರವರ ಹೇಳಿಕೆ |
| ನಿಪಿ.6 | - | ಪ್ರಾಸಾ.4 ರವರ ಹೇಳಿಕೆ |
| ನಿಪಿ.7 | - | ಪ್ರಾಸಾ.5 ರವರ ಹೇಳಿಕೆ |
| ನಿಪಿ.8 | - | ಅಮಾನತ್ತು ಮಹಜರ್ |
| ನಿಪಿ.8(ಎ) | - | ಪ್ರಾಸಾ.6 ರವರ ಸಹಿ |
| ನಿಪಿ.9 | - | ಪ್ರಾಸಾ.6 ರವರ ಹೇಳಿಕೆ |

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು** : ಇಲ್ಲ

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿದಾರರು** : ಇಲ್ಲ

**ಆರೋಪಿಗಳ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು** : ಇಲ್ಲ

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.